ಶ್ರೀ ಮಹಾಬಲ ದೇವಸ್ಥಾನದ ಟ್ರಸ್ಟಿಗಳಿಂದ ಅವ್ಯವಸ್ಥೆ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ?

2. ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಸರಕಾರ ಕೈಗೊಂಡ ಕ್ರಮಗಳೇನು?

3. ಈ ದೇವಸ್ಥಾನವು ಕರ್ನಾಟಕ ರಾಜ್ಯ ಚಾರಿಟಬಲ್ ಟ್ರಸ್ಟ್ ನಿಯಮದಡಿ ಇದುವರೆಗೂ ನೋಂದಣಿಯಾಗದಿರಲು ಕಾರಣಗಳೇನು;

4. ಈ ದೇವಸ್ಥಾನಕ್ಕೆ ಅತೀ ಹೆಚ್ಚಿನ ಉತ್ಪನ್ನವಿರುವುದರಿಂದ ತಿರುಪತಿ - ತಿರುಮಲ ದೇವಸ್ಥಾನ ಅಥವಾ ಸವದತ್ತಿ ಯಲ್ಲಮ್ಮ ದೇವಸ್ಥಾನ ಟ್ರಸ್ಟ್ ಮಾದರಿಯಲ್ಲಿ ನಡೆಸಲಾಗುವುದೇ?

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು):

1. ಈ ಬಗ್ಗೆ ಉಪಾಧಿವಂತ ಮಂಡಳಿ ಗೋಕರ್ಣ ಇವರು ಆಡಳಿತ ಅವ್ಯವಸ್ಥೆಯ ಬಗ್ಗೆ ದೂರಿದ್ದಾರೆ.

2. ಈ ಬಗ್ಗೆ ಪ್ರಕರಣಗಳು ವಿಚಾರಣಾ ಹಂತದಲ್ಲಿರುತ್ತವೆ.

3. ಶ್ರೀ ಮಹಾಬಳೇಶ್ವರ ಬಿ.ಪಿ.ಟಿ. ಕಾಯ್ದೆ 1950ರ ಪ್ರಕಾರ ಎ 540 (ಕಾರವಾರ) ಕ್ರಮಾಂಕದಲ್ಲಿ ನೋಂದಣಿಯಾಗಿರುತ್ತದೆ.

4. ಬಿ.ಪಿ.ಟಿ. ಕಾಯ್ದೆ 1950 ಇದು ಈ ವಿಭಾಗದಲ್ಲಿ ಜಾರಿಯಲ್ಲಿರುವುದರಿಂದ ತಿರುಪತಿ - ತಿರುಮಲ ಅಥವಾ ಸೌಂದತ್ತಿ ಯಲ್ಲಮ್ಮ ದೇವಸ್ಥಾನದ ಟ್ರಸ್ಟ್ ಮಾದರಿಯಲ್ಲಿ ನಡೆಸಲು ಸದ್ಯಕ್ಕೆ ಅವಕಾಶವಿರುವುದಿಲ್ಲ.

ಕಾರವಾರ ವಿಧಾನ ಸಭಾ ಕ್ಷೇತ್ರಕ್ಕೆ ಚುನಾವಣೆ ನಡೆಸುವುದು.

1673(1948)

ಶ್ರೀ ಮೋಹನ್ ಕೆ.ಶೆಟ್ಟಿ (ಕುಮಟಾ): ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರಾದ ಶ್ರೀ ವಸಂತ ಆಸ್ನೋಟಿಕರ ಆಕಸ್ಮಿಕ ಮರಣ ಹೊಂದಿ ಒಂದು ವರ್ಷಕ್ಕಿಂತಲೂ ಹೆಚ್ಚು

ಸಮಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ, ತೆರವಾದ ಸ್ಥಾನಕ್ಕೆ ಇದುವರೆಗೂ ಚುನಾವಣೆ ನಡೆಸದಿರಲು ಕಾರಣಗಳೇನು?

ಇ) ಈ ಕ್ಷೇತ್ರದ ನಾಗರೀಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಶೀಘ್ರವೇ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಆ) ಹೌದು.

ಆ) ಚುನಾವಣಾ ತಕರಾರು ಅರ್ಜಿ ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಇನ್ನೂ ಇತ್ಯರ್ಥವಾಗದಿರುವುದರಿಂದ, ಚುನಾವಣಾ ಆಯೋಗ ಇನ್ನೂ ಚುನಾವಣೆಯನ್ನು ಘೋಷಿಸಿಲ್ಲ.

ಇ) ಭಾರತ ಚುನಾವಣಾ ಆಯೋಗವು ಚುನಾವಣೆ ಘೋಷಿಸಿದಾಗ ನಡೆಸಲಾಗುವುದು.

ಬೀರೂರು ಆರಕ್ಷಕ ಸಿಬ್ಬಂದಿಯವರಿಗೆ ವಸತಿ ಸೌಲಭ್ಯ.

1674(2000)

ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಚಿಕ್ಕಮಗಳೂರು ಜಿಲ್ಲೆ ಬೀರೂರು ಆರಕ್ಷಕ ಸಿಬ್ಬಂದಿಯವರು ವಸತಿ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

2) ಹಾಗಿದ್ದಲ್ಲಿ ಆರಕ್ಷಕ ಕಲ್ಯಾಣ ನಿಧಿಯಿಂದ ಹೊಸದಾಗಿ ವಸತಿ ಗೃಹಗಳನ್ನು ಬೀರೂರು ಪಟ್ಟಣದಲ್ಲಿ ನಿರ್ಮಿಸಲಾಗುತ್ತಿದೆಯೇ ಮಂಜೂರಾತಿ ನೀಡಿ ಗೃಹಗಳನ್ನು ಎಂದಿನಿಂದ ನಿರ್ಮಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

1) ಹೌದು.